ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/17/2016-17. ದಿನಾಂಕ 19-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಸ.ಬೋರಯ್ಯ ತಂದೆ ಪಾಪಯ್ಯ<br>2)ತಿಪ್ಪಯ್ಯ ತಂದೆ ಗಂಟೆ ಪಾಪಯ್ಯ<br>3)ಜುವುಗು ಬೋರಯ್ಯ ತಂದೆ ವಡುಕಿನ ಬೋರಯ್ಯ<br>4)ಸಣ್ಣ ಪಾಪಯ್ಯ ತಂದೆ ಯರ್ರಯ್ಯ<br>ರಾಮಸಾಗರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು<br>5)ಓಬಮ್ಮ ಗಂಡ ಲೇಟ್ ಸಾರಂಗಯ್ಯ<br>ಹಿರೇಹಳ್ಳಿ ಗ್ರಾಮ ಚಳ್ಳಕೇರೆ ತಾಲೂಕು<br>ಚಿತ್ರದುರ್ಗ ಜಿಲ್ಲಾ | ಜಿ.ಬಸವರಾಜ ತಂದೆ ಗಂಟೆ ಪಾಪಯ್ಯ<br>ರಾಮಸಾಗರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಗಂಡಾಬೊಮ್ಮನಹಳ್ಳಿ ಗ್ರಾಮದ ಸನಂ 403ಪೈಕಿ. ವಿಸ್ತೀರ್ಣ 28-25. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಗಂಡಾಬೊಮ್ಮನಹಳ್ಳಿ ಗ್ರಾಮದ ಸನಂ 403ಪೈಕಿ. ವಿಸ್ತೀರ್ಣ 28-25. ಎಕ್ರೆ ಜಮೀನನ್ನು ಚಿತ್ರದುರ್ಗ ಜಿಲ್ಲಾ ಚಳ್ಳಕೇರೆ ತಾಲೂಕು ಹಿರೇಹಳ್ಳಿ ಗ್ರಾಮದ ಓಬಮ್ಮ ಗಂಡ ಲೇಟ್ ಸಾರಂಗಯ್ಯ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಗಂಡಾಬೊಮ್ಮನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 19-09-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ರಾಮಸಾಗರಹಟ್ಟಿ ಗ್ರಾಮದ ಜಿ.ಬಸವರಾಜ ತಂದೆ ಗಂಟೆ ಪಾಪಯ್ಯ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 05/2015-16. ದಿನಾಂಕ 20-10-2015. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 30-08-2016. ರಿಂದ 19-09-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ.ಅರ್ಜಿದಾರರ ಪರ ನ್ಯಾಯಾವಾದಿಗಳು ಗಂಡಾಬೊಮ್ಮನಹಳ್ಳಿ ಗ್ರಾಮದ ಸನಂ 403. ವಿಸ್ತೀರ್ಣ 28-25. ಎಕ್ರೆ ಜಮೀನು ಅರ್ಜಿದಾರರ ಮಾವನವರಾದ ಕುಂಟಬೋರಯ್ಯ ತಂದೆ ಹುಲಿಕುಂಟೆ ಮುತ್ತಯ್ಯ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ ಇವರು ದಿನಾಂಕ 17-08-2014 ರಂದು ಹಾಗೂ ಅವರ ಅತ್ತೇಯವರಾದ ಮಾರೆಕ್ಕ ಗಂಡ ಕುಂಟ ಬೋರಯ್ಯ ಇವರು ದಿನಾಂಕ 06-10-1971 ರಂದು ಹಾಗೂ ಅರ್ಜಿದಾರರ ಗಂಡನಾದ ಸಾರಂಗಯ್ಯ ಇವರು ದಿನಾಂಕ 13-12-2012 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಕುಂಟಬೋರಯ್ಯ ಇವರ ಹೆಸರನ್ನು ಕಡಿಮೆ ಮಾಡಿ ಅರ್ಜಿದಾರರಾದ ಓಬಮ್ಮ ಗಂಡ ಲೇಟ್ ಸಾರಂಗಯ್ಯ ಇವರ ಹೆಸರಲ್ಲಿ ಹಕ್ಕು

ಪು.ತಿ.ನೋ:-2.

ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನಪೈಕಿ. 3-00. ಎಕ್ರೆ ಜಮೀನನ್ನು ಸಾರಂಗಯ್ಯ ತಂದೆ ಕುಂಟ ಬೋರಯ್ಯ ಇವರಿಂದ ಗಂಟೆ ಮಾರಯ್ಯ ತಂದೆ ಕುಂಟಯ್ಯ ಇವರು ದಿನಾಂಕ 24-05-1966 ರಡಾಕ್ಯುಮೆಂಟ್ ನಂಬರ್:1146/1966-67 ರ ಪ್ರಕಾರ ಕ್ರಯಕ್ಕೆ ಕೊಟ್ಟಿರುತ್ತಾರೆ. ಹಾಗೂ ದಿನಾಂಕ 30-12-1985 ರ ಡಾಕ್ಯುಮೆಂಟ್ ನಂಬರ್: 913/1975-76. ರ ಪ್ರಕಾರ ಸದರಿ ಸಾರಂಗಯ್ಯ ಇವರು ಸದರಿ ಸನಂ ಪೈಕಿ. 8-00 ಎಕ್ರೆ ಜಮೀನನ್ನು ಗಂಟೆ ಪಾಪಯ್ಯ ತಂದೆ ಕುಂಟಯ್ಯ ಇವರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ. ಇವರು ಕ್ರಯ ಪಡೆದ ಒಟ್ಟು ವಿಸ್ತೀರ್ಣ 11-00 ಎಕ್ರೆ ಆಗಿರುತ್ತದೆ. ಸದರಿ ಕ್ರಯದಾರರ ಹೆಸರಲ್ಲಿ ಎಂ.ಆರ್.ನಂಬರ್: 16/1975-76 ರ ಪ್ರಕಾರ ದಾಖಲೆಯಾಗಿದೆ. ನಂತರ ದಿನಾಂಕ 30-05-1967 ರಂದು ಡಾಕ್ಯುಮೆಂಟ್ ನಂಬರ್: 453/1967-68 ರ ಪ್ರಕಾರ ಸದರಿ ಸಾರಂಗಯ್ಯ ಇವರು ಸಣ್ಣ ಪಾಪಯ್ಯ ತಂದೆ ಯರ‍್ರಯ್ಯ ಇವರಿಗೆ ಸದರಿ ಸನಂ ಪೈಕಿ. 3-00. ಎಕ್ರೆ ಜಮೀನನ್ನು ಕ್ರಯಕ್ಕೆ ಕೊಟ್ಟಿರುತ್ತಾರೆ. ಎಂ.ಆರ್.ನಂಬರ್: 03/1973-74 ರ ದಾಖಲೆಯಾಗಿದೆ

ಈ ಎಲ್ಲಾ ಕಾರಣಗಳನ್ನು ತಮ್ಮ ನ್ಯಾಯಾಲಯದ ಸಂ/ಕಂ/ಹ.ಬ./ನಾಕಗು/33/2014-15.ರ ಪ್ರಕರಣದಲ್ಲಿ ಉಲ್ಲೇಖಿಸಲಾಗಿದೆ. ಕಾರಣ ಸದರಿ ಅರ್ಜಿದಾರರಾದ ಓಬಮ್ಮ ಗಂಡ ಲೇಟ್ ಸಾರಂಗಯ್ಯ ಇವರಿಗೆ ಸದರಿ ಜಮೀನಿನಲ್ಲಿ ಯಾವ ಹಕ್ಕು ಅಧಿಕಾರ ಇರುವುದಿಲ್ಲ ಕಾರಣ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಸದರಿ ಜಮೀನನ್ನು ಅರ್ಜಿದಾರಳ ಗಂಡನಾದ ಸಾರಂಗಯ್ಯ ಇವರು ಸದರಿ ಜಮೀನನ್ನು ಕ್ರಯಕ್ಕೆ ಕೊಟ್ಟು ನೊಂದಣಿ ಮಾಡಿಸಿರುವುದು ಕಂಡು ಬರುತ್ತದೆ. ಹಾಗೂ ಸದರಿ ಪ್ರಕರಣವು ಈ ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಲಾದ ಪ್ರಕರಣ ಸಂಖ್ಯೆ ಸಂ/ಕಂ/ಹ.ಬ./ನಾ.ಕ.ಗು. /33/2014-15. ದಿನಾಂಕ 16-04-2015. ರಲ್ಲಿಯು ಇದ್ದು ಸದರಿ ಪ್ರಕರಣದಲ್ಲಿ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿರುವುದರಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಗಂಡಾಬೊಮ್ಮನಹಳ್ಳಿ ಗ್ರಾಮದ ಸನಂ 403. ವಿಸ್ತೀರ್ಣ 28-25. ಎಕ್ರೆ ಜಮೀನನ್ನು ಈಗಾಗಲೆ ಇದೇ ನ್ಯಾಯಾಲಯದ ಪ್ರಕರಣ ಸಂ/ಕಂ/ಹ.ಬ./ನಾ.ಕ.ಗು./33/2014-15. ದಿನಾಂಕ 16-04-2015. ರಲ್ಲಿ ಇತ್ಯರ್ಥ ಪಡಿಸಿ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿರುವುದರಿಂದ ಅರ್ಜಿದಾರರ ಕೋರಿಕೆಯನ್ನು ತಳ್ಳಿಹಾಕುತ್ತಾ ಯಥಾಸ್ಥಿತಿಯಂತೆ ಪುನಹ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಿಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 19-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ, ಗುಡೇಕೋಟೆ.
ಮು.ತ.ನೋ-3.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಓಬಮ್ಮ ಗಂಡ ಲೇಟ್ ಸಾರಂಗಯ್ಯ ಹಾಗೂ ಇತರರು ಹಿರೇಹಳ್ಳಿ ಗ್ರಾಮ ಚಳ್ಳಕೇರಿ ತಾಲೂಕು ಚಿತ್ರದುರ್ಗ ಜಿಲ್ಲಾ ಇವರ ಪರ ವಕೀಲರಾದ ಬಿ. ಪ್ರಕಾಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಜಿ.ಬಸವರಾಜ ತಂದೆ ಗಂಟೆ ಪಾಪಯ್ಯ ರಾಮಸಾಗರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎ.ಶಿವರಾಜ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.